# ಕಾಶ್ಮೀರ ವಿಧಾನಪರಿಷತ್ ಬರ್ಖಾಸ್ತು

ಶ್ರೀನಗರ: ಜಮ್ಮು - ಕಾಶ್ಮೀರ ಪುನರ್ ರಚನೆ ಕಾಯ್ದೆಯು ಅ.31ರಿಂದ ಜಾರಿಯಾಗುವ ಹಿನ್ನೆಲೆಯಲ್ಲಿ ಜಮ್ಮು-ಕಾಶ್ಮೀರದಲ್ಲಿ ಅಸ್ತಿತ್ವದಲ್ಲಿದ್ದ ವಿಧಾನ ಪರಿಷತ್ತನ್ನು ಬರ್ಖಾಸ್ತುಗೊಳಿಸಲಾಗಿದೆ. 62 ವರ್ಷಗಳಿಂದ ಜಾರಿಯಲ್ಲಿದ್ದ ವಿಧಾನ ಪರಿಷತ್‌ನ್ನು ರಾಜ್ಯಪಾಲರ ಆಡಳಿತ ರದ್ದುಗೊಳಿಸಲು ಆದೇಶಿಸಿದ್ದು, ಪರಿಷತ್‌ನ 116 ಸಿಬ್ಬಂದಿಗೆ ಅ.22ರೊಳಗಾಗಿ ಸಾಮಾನ್ಯ ಆಡಳಿತ ವಿಭಾಗಕ್ಕೆ ವರದಿ ಮಾಡಿಕೊಳ್ಳಲು ಸೂಚನೆ ನೀಡಿದೆ.



ಜತೆಗೆ ಎಲ್ಲ ವಾಹನಗಳನ್ನು ರಾಜ್ಯ ಮೋಟಾರು ಗ್ಯಾರೇಜುಗಳ ನಿರ್ದೇಶಕರಿಗೆ ವರ್ಗಾಯಿಸಲು ಮತ್ತು ಕೌನ್ಸಿಲ್ ಕಟ್ಟಡ, ಪೀಠೋಪಕರಣಗಳು ಹಾಗೂ ಎಲೆಕ್ಟ್ರಿಕ್ ವಸ್ತುಗಳನ್ನು ಎಸ್ಟೇಟ್ ಇಲಾಖೆಯ ನಿರ್ದೇಶಕರಿಗೆ ಹಸ್ತಾಂತರಿಸುವಂತೆ ರಾಜ್ಯದ ಮುಖ್ಯ ಕಾರ್ಯದರ್ಶಿ ಫಾರೂಕ್ ಅಹ್ಮದ್ ಖಾನ್ ಹೊರಡಿಸಿರುವ ಆದೇಶದಲ್ಲಿ ತಿಳಿಸಲಾಗಿದೆ. ಜತೆಗೆ ಶಾಸಕಾಂಗ ವ್ಯವಹಾರ ಸಚಿವಾಲಯಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಕಾನೂನು ಇಲಾಖೆ ಹಾಗೂ ನ್ಯಾಯಾಂಗ ಸಂಸದೀಯ ವ್ಯವಹಾರಗಳ ಕಾರ್ಯದರ್ಶಿಗೆ ವರ್ಗಾಯಿಸಲು ತಿಳಿಸಲಾಗಿದೆ. 1957ರಲ್ಲಿ 36 ಸದಸ್ಯರನ್ನೊಳಗೊಂಡ ವಿಧಾನ ಪರಿಷತ್‌ನ್ನು ರಚಿಸಲಾಗಿತ್ತು. ಕೇಂದ್ರ ಸರ್ಕಾರ ಕಳೆದ ಆ.5ರಂದು ಜಮ್ಮು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿ ಮತ್ತು ಕಣಿವೆ ರಾಜ್ಯವನ್ನು ಜಮ್ಮು - ಕಾಶ್ಮೀರ (ವಿಧಾನಸಭೆ ಸಹಿತ) ಕೇಂದ್ರಾಡಳಿತ ಪ್ರದೇಶ ಮತ್ತು ಲಡಾಖ್ ಭಾಗವನ್ನು (ವಿಧಾನ ಸಭೆ ರಹಿತ) ಕೇಂದ್ರಾಡಳಿತ ಪ್ರದೇಶವನ್ನಾಗಿ ರಚಿಸುವ ಮಸೂದ ಮಂಡಿಸಿ ಅದಕ್ಕೆ ಸಂಸತ್‌ನ ಒಪ್ಪಿಗೆ ಪಡೆದಿತ್ತು.